Doctors working as Local Candidates in Public Health and Medical Department.

*Q.—453. Sri H. D. DEVE GOWDA (Holenarasipur).—

Will the Government be pleased to state:—

(*a*) the number of Doctors working as local candidates in Public Health and Medical Departments and since how long they are working as local candidates;

(*b*) Whether it is a fact that some of the doctors who are working as local candidates in these Departments since 1958-59 are not confirmed in their appointments or their services regularised and, if so, the reasons for the same;

(*c*) the number of vacancies in the posts of Assistant Surgeons and other doctors both in the Public Health and Medical Departments and since how long these vacancies are not filled up and the reasons for the same ?

A.—Sri K. NAGAPPA ALVA (Minister for Health).—

(*a*) 227. One is working since 25th June 1954 and others ars working from November 1958 and onwards.

(*b*) Yes. They have been appointed purely on temporary basis.

(*c*) 359. For the last 4 years. Due to dearth of doctors the vacancies could not be filled up.

ಶ್ರೀ ಎಚ್. ಡಿ. ದೇವೇಗೌಡ—(ಎ)ಗೆ ಉತ್ತರವಾಗಿ 227 ಎಂದು ಹೇಳಿ, (ಸಿ)ಗೆ ಕೊಟ್ಟಿರುವ ಉತ್ತರದಲ್ಲಿ 359 ಹುದ್ದೆಗಳು ಖಾಲಿ ಇರುತ್ತವೆಂದು ಹೇಳಲಾಗಿದೆ. ಇದರ ಅರ್ಥವೇನು? ಇವರು ಆ ಸ್ಥಾನಗಳಿಗೆ ಅರ್ಹರಾಗಿರಲಿಲ್ಲವೆ?

ಶ್ರೀ ಕೆ. ನಾಗಪ್ಪ ಆಳ್ವ.—ಭರ್ತಿ ಮಾಡುವುದಕ್ಕೆ ಒಂದು ಕ್ರಮವಿದೆ. ಆ ಕ್ರಮಕ್ಕೆ ಸರಿಯಾಗಿ ಭರ್ತಿ ಮಾಡುವುದಕ್ಕೆ ಆಗಲಿಲ್ಲ. ಡಾಕ್ಟರುಗಳ ಅಭಾವ ಜಾಸ್ತಿಯಾಗಿರುವುದರಿಂದ ಅಷ್ಟು ಜಾಗ್ರತೆಯಾಗಿ ಭರ್ತಿಮಾಡುವುದಕ್ಕೆ ಆಗಲಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಕ್ರಮಕ್ಕೆ ಸರಿಯಾಗಿ ಭರ್ತಿ ಮಾಡಲು ಎಷ್ಟು ವರ್ಷ ಬೇಕು ?

[*No reply*]

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ವೈದ್ಯ ಇಲಾಖೆಯಲ್ಲಿರತಕ್ಕ ಹಂಗಾಮಿ ಡಾಕ್ಟರುಗಳನ್ನು ಪರಿಪೂರ್ಣವಾಗಿ ಖಾಯಂ ಮಾಡಿದೆ ಇರುವುದರಿಂದ ಬೇರೆಯವರು ಈ ಇಲಾಖೆಯಲ್ಲಿ ನೌಕರಿಗೆ ಬಾರದೆ ಇರುವುದರಿಂದ ಸ್ಥಾನಗಳು ಹೀಗೆ ಖಾಲಿ ಬೀಳಲು ಕಾರಣವಾಯಿತು ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಶ್ರೀ ಕೆ. ನಾಗಪ್ಪ ಆಳ್ವ.—ಅವರು ಹೇಳುವಷ್ಟರ ಮಟ್ಟಿಗೆ ಆಗಿಲ್ಲ. ಸ್ವಲ್ಪ ಮಟ್ಟಿಗೆ ಡಾಕ್ಟರರ ಅಭಾವವೂ ಇದೆ.

Sri G. V. GOWDA.—Why could not the Government recruit according to the rules since 1958, inasmuch as it has to employ 227 local candidates?

Sri K. NAGAPPA ALVA.—The Cadre and Recruitment Rules could not be finalised and that is why we could not advertise the posts.

ಶ್ರೀ ಎಸ್. ಗೋಪಾಲ ಗೌಡ.—1954ನೇ ಇಸವಿ ಜೂನ್ 25ನೇ ದಿನಾಂಕದಿಂದ ಒಬ್ಬ ವೈದ್ಯರು ಕೆಲಸ ಮಾಡುತ್ತಿದ್ದಾರೆಂದು ಹೇಳಿರುವುದನ್ನು ಸೇರಿಸಿ ಒಟ್ಟು 227 ಜನರು ಇನ್ನೂ ಹಂಗಾಮಿಯಾಗಿ ಕೆಲಸ ಮಾಡುತ್ತಿದ್ದಾರೆಂದು ಹೇಳಿದ್ದೀರಿ. ಅವರೆಲ್ಲ ಅರ್ಹತೆ ಪೂರ್ತಿ ಪಡೆದಿರುವರಲ್ಲವೇ?

ಶ್ರೀ ಕೆ. ನಾಗಪ್ಪ ಆಳ್ವ.—ಹೌದು.

ಶ್ರೀ ಎಸ್. ಗೋಪಾಲ ಗೌಡ.—ಅವರನ್ನು ಖಾಯಂ ಮಾಡುವುದಕ್ಕೇನಾದರೂ ಸರ್ಕಾರ ಡೆವರು ಕ್ರಮ ತೆಗೆದುಕೊಂಡಿದ್ದಾರೆಯೇ?

ಶ್ರೀ ಕೆ. ನಾಗಪ್ಪ ಆಳ್ವ.—ಈಗ್ಗೆ ಕೆಲವು ದಿನಗಳ ಹಿಂದೆ 160 ಹುದ್ದೆಗಳನ್ನು ನಾವು ಪಬ್ಲಿಕ್ ಸರ್ವಿಸ್ ಕಮಿಷನ್ ಮುಖಾಂತರ ಅಡ್ವರ್ಟೈಜ್ ಮಾಡಿದ್ದೇವೆ. ಇನ್ನು ಒಂದು ತಿಂಗಳೊಳಗಾಗಿ ಬಾಕಿ ಹುದ್ದೆಗಳನ್ನು ಅಡ್ವರ್ಟೈಜ್ ಮಾಡಿ ನೇಮಕಗಳನ್ನು ಮಾಡುತ್ತಿದ್ದೇವೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ನುಮಾರು ಐದಾರು ವರ್ಷಗಳಿಂದಲೂ 227 ಜನ ಡಾಕ್ಟರು ಗಳಿಗೆ ಕನ್‌ಫರ್ಮ್ ಮಾಡದೆ ಮತ್ತು ರೆಕ್ರೂಟ್ ಮಾಡದೇ ಇರುವುದರಿಂದ ಈಗ ರೆಕ್ರೂಟ್ ಮಾಡು ತ್ತೇವೆಂದು ತಿಳಿಸಿರುವುದರಿಂದ ಆರೇಳು ವರ್ಷಗಳಿಂದಲೂ ಇರತಕ್ಕ ಡಾಕ್ಟರುಗಳ ಸೀನಿಯಾರಿಟಿ ಮತ್ತು ನಂಬಳ ಈ ವಿಷಯಗಳನ್ನು ಗಮನಕ್ಕೆ ತೆಗೆದುಕೊಂಡು ರೆಕ್ರೂಟ್ ಮಾಡುತ್ತೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಮುಖಾಂತರ ಹುದ್ದೆಗಳಿಗೆ ನೇಮಕ ವಾದನಂತರ ಪ್ರತಿಯೊಂದು ವಿಚಾರವಾಡಿ ಅವರಿಗೆ ಎಲ್ಲಾ ವಿಧದಲ್ಲೂ ಅಂದರೆ ಅವರ ಸೀನಿಯಾರಿಟಿ, ಇಂಕ್ರಿಮೆಂಟ್ ಮತ್ತು ನಂಬಳದ ಬಗ್ಗೆ ವಿಚಾರ ಮಾಡಿ ಸರಿಪಡಿಸುತ್ತೇವೆ.

ಶ್ರೀ ಎಸ್. ಶಿವಪ್ಪ.—359 ಖಾಲಿ ಹುದ್ದೆಗಳ ಪೈಕಿ 227 ಜನರನ್ನು ಹಂಗಾಮಿಯಾಗಿ ನೇಮಕ ಮಾಡಿರುವಾಗ ಅವರನ್ನು ಖಾಯಂ ಮಾಡಿದ್ದರೆ ಬೇಕಾದಷ್ಟು ಸೌಲಭ್ಯಗಳು ದೊರೆಯುತ್ತಿ ದ್ದವು. ಇನ್ನೂ ಅವರನ್ನು ಹಂಗಾಮಿಯಾಗಿಯೇ ಇಟ್ಟಿರುವುದರಿಂದ ಅವರನ್ನು ಖಾಯಂ ಮಾಡುವ ನಂದರ್ಭದಲ್ಲಿ ಅವರಿಗೆ ಎಲ್ಲಾ ಸೌಕರ್ಯಗಳನ್ನು ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಕೆ. ನಾಗಪ್ಪ ಆಳ್ವ.—ಅದಕ್ಕೆ ಬೇಕಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

Plan and Estimate proposed by the Executive Engineer, Mandya, to bring under wet cultivation about ten thousand acres of land.

*Q.—460. Sri S. M. KRISHNA (Maddur).—

Will the Government be pleased to state:—

(*a*) whether any plan and estimates have been proposed by the Executive Engineer, Mandya to bring under wet cultivation about ten thousand acres and stabilising water supply to about twenty-five thousand acres in Mandya District.

(*b*) What is the amount that is estimated to be spent on that programme;

(*c*) whether the State Government have approved the programme and if the answer is in the nagative, whether they would attempt to obtain central Government assistance in view of the package plan in the District?

A.— Sri S. NIJALINGAPPA (Chief Minister).—

(*a*) Yes.

(*b*) About Rs. 130.85 lakhs.

(*c*) No. This will be considered on receipt of the estimates from the Chief Engineer (Gl.) Bangalore.

ಶ್ರೀ ಎಸ್. ಎಂ. ಕೃಷ್ಣ.—ನನ್ನ (ಇ) ಪ್ರಶ್ನೆಗೆ ಉತ್ತರವಾಗಿ ನದರೀ ವಿಚಾರವನ್ನು ಚೀಫ್ ಇಂಜಿನಿಯರಿಗೆ ರೆಫರ್ ಮಾಡಿದೆ ಎಂದು ಆಪ್ಷನ್ ಕೊಟ್ಟಿದ್ದೀರಿ. ಎಷ್ಟು ದಿವನಗಳೊಳಗೆ ಅವರಿಂದ ವರದಿಯನ್ನು ನಿರೀಕ್ಷಣೆ ಮಾಡುತ್ತೀರಿ?